# ಆಹಾ ಸುದ್ದಿ!

★ ಸಸಿತೋಟ

ಪೂಜಾ ಸ್ಥಳ, ಪ್ರಾರ್ಥನಾ ಮಂದಿರಗಳಿಗೆ ಹೋದರೆ ಯಥಾನುಶಕ್ತಿ ಕಾಣಿಕೆ ಹಾಕುವುದು ವಾಡಿಕೆ. ಜೆರುಸಲೇಂನಲ್ಲಿ ತಲಾ ಒಂದು ದಶಲಕ್ಷ ಡಾಲರ್‌ನ ಒಟ್ಟು ಅರ್ಧ ಶತಕೋಟಿ ಮೊತ್ತದ 500 ಚೆಕ್ಕುಗಳನ್ನು ಹಾಕಲಾಗಿತ್ತಂತೆ. ಚೆಕ್ಕುಗಳನ್ನು ಬ್ಯಾಂಕಿಗೆ ಹಾಕಿದಾಗ ಎಲ್ಲವೂ ಬೌನ್ಸ್. ಎಲ್ಲವೂ ನೈಜೀರಿಯಾ ಪ್ರಜೆಗಳಿಗೆ ಸೇರಿದ ಚೆಕ್ಕುಗಳಂತೆ. ವಂಚನೆ ಹೇಗೆ ಮಾಡಬೇಕು ಎಂಬುದನ್ನು ಎಲ್ಲರಿಗೂ ಹೇಳಿಕೊಡುವ ಸಾಮರ್ಥ್ಯವುಳ್ಳ ನೈಜೀರಿಯನ್ನರು ದೇವರಿಗೇ ವಂಚನೆ ಮಾಡಲು ಹೊರಟಿದ್ದರು.



ಮೆಕ್ಸಿಕೋದ ಈ ಮಾದಕ ಚೆಲುವೆಯ ಹೊಕ್ಕುಳ ಬಳಿ ಅರಳಿದ್ದು ಮಾದಕ ದ್ರವ್ಯ ಮಾರಿಹ್ವಾನ (ಗಾಂಜಾ) ಎಲೆಯ ಚಿತ್ರ. ಅಲ್ಲೀಗ ಮಾರಿಹ್ವಾನ ಹಬ್ಬದ ಸಂಭ್ರಮವಂತೆ. ವೈನ್ ಹಬ್ಬದಂತೆ ಇದೂ ಕೂಡಾ ಎನ್ನುತ್ತಿರುವ ಯುವಕ- ಯುವತಿಯರು ಮಾರಿಹ್ವಾನ ಸೇವನೆಯನ್ನು ಸರ್ಕಾರ ಕಾನೂನುಬದ್ಧಗೊಳಿಸಬೇಕು ಎಂದು ಒತ್ತಾಯಿಸುವ ನಿರ್ಣಯ ಕೈಗೊಂಡಿದ್ದಾರಂತೆ. ನಿರ್ಣಯವನ್ನು ಗಾಂಜಾ ಸೇವನೆ ಮತ್ತಿನಲ್ಲಿ ಕೈಗೊಂಡಿದ್ದಾದರೆ ಸರ್ಕಾರ ಸೇಫ್.

ದಕ್ಷಿಣ ಕೆರೊಲಿನಾದ ನ್ಯೂಬೆರಿ ಕಾಲೇಜಿನಲ್ಲಿ ಸಾಮಾಜಿಕ ಜಾಲತಾಣಗಳ ಬಗ್ಗೆ ಪದವಿ ಕೋರ್ಸ್‌ನ್ನು ಆರಂಭಿಸಲಾಗಿದೆಯಂತೆ. ಅದೂ ಕಾಲೇಜು ಶುಲ್ಕ ಭರಿಸಲಾಗದೇ ಕಾಲೇಜನ್ನು ಅರ್ಧಕ್ಕೇ ಬಿಟ್ಟವರಿಗೆ. ಇನ್ನು ಮುಂದೆ ಮನೆಯಲ್ಲಿ ಕಂಪ್ಯೂಟರ್ ಮುಂದೆ ಟ್ವೀಟ್ ಮಾಡುತ್ತ, ಫೇಸ್‌ಬುಕ್‌ನಲ್ಲಿ ಬರೆಯುತ್ತ ಕುಳಿತರೆ ಅದು ಹೋಂವರ್ಕ್ ಎಂದು ಪೋಷಕರಿಗೆ ಸಬೂಬು ಹೇಳಬಹುದು.



ಆಸ್ಟ್ರೇಲಿಯಾದ ಸಂಸದ ಹಂಟರ್ 70ರ ಹರೆಯದಲ್ಲಿ ಸಂಗಾತಿಯ ಹಂಟಿಂಗ್ ಶುರು ಮಾಡಿಕೊಂಡರು. ಸಂಗಾತಿ ಸಿಕ್ಕು ಸ್ಪೇನ್‌ಗೆ ತೆರಳಿ ಮದುವೆ ಮಾಡಿಕೊಂಡರು. ಆಸ್ಟ್ರೇಲಿಯಾದಲ್ಲಿ ಮದುವೆಯಾಗಿದ್ದರೆ ಅತಿಥಿಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಬಂದು ಆಶೀರ್ವಾದ ಮಾಡುತ್ತಿದ್ದರೇನೋ! ಆದರೆ ಆಸ್ಟ್ರೇಲಿಯಾ ಸರ್ಕಾರ ಇವರ ಮದುವೆಗೆ ನಿರ್ಬಂಧ ಹಾಕಿತ್ತು. ಅಷ್ಟಕ್ಕೂ ಹಂಟರ್ ಮದುವೆಯಾದ ವಧು ಹಂಟರ್‌ವಾಲಿಯಾಗಿರದೇ ಹಂಟರ್‌ವಾಲಾ ಆಗಿದ್ದುದೇ ಇದಕ್ಕೆಲ್ಲ ಕಾರಣ.

ಮಾಲ್ಟಾದಲ್ಲಿ ಇಟಲಿ ಸರ್ಕಸ್ ಕಂಪೆನಿಯ ಡೇರೆಯನ್ನು ನಗರದಿಂದ ಹೊರಗೆ ಹಾಕಬೇಕು ಎಂಬ ನಗರಾಡಳಿತದ ಆದೇಶವನ್ನು ಪ್ರತಿಭಟಿಸಿ ಸರ್ಕಸ್ ಕಂಪೆನಿ ಮಾಲೀಕ ಪ್ರತಿಭಟನೆ ಆರಂಭಿಸಿದ. ತಾನೇ ತರಬೇತಿ ನೀಡಿದ್ದ ಹುಲಿಯ ಪಂಜರದಲ್ಲಿ ಕುಳಿತು ಪ್ರತಿಭಟನೆ ಆರಂಭಿಸಿದ ಕೂಡಲೇ ಹುಲಿಯೂ ಜೋರಾಗಿ ಘರ್ಜಿಸುತ್ತ ಪ್ರತಿಭಟನೆ ಶುರು ಮಾಡಿತು, ಮಾಲೀಕನನ್ನು ತನ್ನ ಪಂಜರದಿಂದ ಹೊರಗೆ ಹಾಕಬೇಕೆಂಬ ಇರಾದೆ ಇರಬಹುದು. ಮಾಲೀಕನ ಬೇಡಿಕೆ ನಗರಾಡಳಿತಕ್ಕೆ ಕೇಳಿಸುವ ಮುನ್ನವೇ ಹುಲಿಯ ಬೇಡಿಕೆ ಊರಿಗೆಲ್ಲ ಕೇಳಿಸಿದ್ದರಿಂದ ಮಾಲೀಕ ಪ್ರತಿಭಟನೆ, ಬೇಡಿಕೆ ಎಲ್ಲವನ್ನೂ ಮರೆತು ತೆಪ್ಪಗೆ ಹೊರಬಂದನಂತೆ.



ಚೀನಾದಲ್ಲಿ ಮಾನಸಿಕ ರೋಗಗಳ ಚಿಕಿತ್ಸಾ ಕೇಂದ್ರದಲ್ಲಿ 'ಶವಪೆಟ್ಟಿಗೆ ಅನುಭವ' ಚಿಕಿತ್ಸೆ ಶುರುವಾಗಿದೆ. ರೋಗಿಯನ್ನು ಶವಪೆಟ್ಟಿಗೆಯಲ್ಲಿ ಐದು ತಾಸುಗಳ ಕಾಲ ಮಲಗಿಸಿ ಆಮೇಲೆ ಅನುಭವಗಳನ್ನು ಬರೆಯಿಸಿಕೊಳ್ಳುತ್ತಾರಂತೆ. ಇದು ಚಿಕಿತ್ಸೆಗೆ ಹೇಗೆ ನೆರವಾಗುತ್ತದೋ ಗೊತ್ತಿಲ್ಲ, ಸತ್ತ ಮೇಲೆ ಶವಪೆಟ್ಟಿಗೆಯಲ್ಲಿ ಹೇಗೆ ಮಲಗಬೇಕು ಎಂಬುದರ ಅನುಭವವನ್ನಂತೂ ಕೊಡಬಹುದು, ಆದರೆ ಸತ್ತ ನಂತರ ನಾವೇ ಮಲಗಬೇಕೋ ಅಥವಾ ಮಲಗಿಸುವವರು ಬೇರೆಯವರೋ ಎಂಬ ಪ್ರಶ್ನೆ ಆ ರೋಗಿಗಳಲ್ಲಿ ಬಹುಶಃ ಮೂಡಿರಲಾರದು.

